# ನೆರೆ ಮುನಿದರೆ...

**ಸೂಜಿ ಮೇಲೆ ತಪಸ್ಸು ಮಾಡಿದಂತೆ ನೆರೆಹೊರೆಯವರನ್ನು ಬ್ಯಾಲೆನ್ಸ್ ಮಾಡಿಕೊಂಡು ಬಾಳಬೇಕು. ಧರೆ ಹೊತ್ತಿ ಉರಿದರೆ ನಿಲಬಹುದು, ನೆರೆ ಮುನಿದರೆ ನೆಮ್ಮದಿಯಿಂದ ಬಾಳಲಾಗದು.**

■ ಮಣ್ಣೆ ರಾಜು

ನೆರೆಯ ಶತ್ರು ರಾಷ್ಟ್ರಗಳ ಮೇಲೆ ಯುದ್ಧ ಮಾಡಿ ಗೆದ್ದು ಬೀಗಬಹುದು. ಆದರೆ ನೆರೆ ಮನೆಯವರೊಂದಿಗೆ ಜಗಳವಾಡಿ ಗೆದ್ದು ನೆಮ್ಮದಿ ಕಂಡವರಿಲ್ಲ. ನೆರೆಮನೆಯವರ ಸಹವಾಸವೇ ಬೇಡ ಎಂದು ಕಾಂಪೌಂಡ್ ಹಾಕಿಕೊಂಡು ನಮ್ಮ ಪಾಡಿಗೆ ನಾವು ಇರಲೂ ಸಾಧ್ಯವಿಲ್ಲ.

ನೆರೆಹೊರೆಯವರಿಂದ ದಿನ ಬೆಳಗಾದರೆ ಒಂದಲ್ಲಾ ಒಂದು ಕಿರಿಕಿರಿ, ಕಿತಾಪತಿ ಎದುರಾಗಬಹುದು. ಅಕ್ಕಪಕ್ಕದ ಮನೆಯವರೊಂದಿಗೆ ಜಗಳ ಶುರುವಾಗಲು ದೊಡ್ಡ ಕಾರಣ ಬೇಕಾಗಿಲ್ಲ, ನಿಮ್ಮ ಮನೆಯ ಕಸ ಗಾಳಿಗೆ ಹಾರಿ ಅವರ ಮನೆ ಬಾಗಿಲಿಗೆ ಹೋದರೂ ಅವರು ನಿಮ್ಮ ವಿರುದ್ಧ ಕಾಲು ಕೆರೆಯಬಹುದು. ನಿಮ್ಮ ಮನೆ ಟೀವಿ ಸೌಂಡ್ ಜೋರಾದರೂ ಅವರು ಜಗಳಕ್ಕೆ ಬರಬಹುದು. ನಿಮ್ಮ ಮನೆ ಬಾಗಿಲು ತೊಳೆದ ನೀರು ಅವರ ಮನೆ ಮುಂದಿನ ರಂಗೋಲಿ ಕೆಡಿಸಿ ಸಂಬಂಧ ಕೆಡಿಸಬಹುದು. ಸೂಜಿ ಮೇಲೆ ತಪಸ್ಸು ಮಾಡಿದಂತೆ ನೆರೆಹೊರೆಯವರನ್ನು ಬ್ಯಾಲೆನ್ಸ್ ಮಾಡಿಕೊಂಡು ಬಾಳಬೇಕು. ನೆರೆಹೊರೆಯ ಸಹವಾಸ, ಸಂಬಂಧ ಉಳಿಸಿಕೊಳ್ಳುವುದು ಸವಾಲೇ ಸರಿ. ಧರೆ ಹೊತ್ತಿ ಉರಿದರೆ ನಿಲಬಹುದು, ನೆರೆ ಮುನಿದರೆ ನೆಮ್ಮದಿಯಿಂದ ಬಾಳಲಾಗದು.

ಮೊನ್ನೆ ಹೀಗೇ ಆಯ್ತು. ಮೀನಾಕ್ಷಿ ಮನೆಯ ಒಗ್ಗರಣೆ ಘಾಟಿಗೆ ಪಕ್ಕದ ಮನೆಯ ಕಾಮಾಕ್ಷಿ ಮನೆಯ ಅಜ್ಜಿಗೆ ಕೆಮ್ಮು ಜಾಸ್ತಿಯಾಗಿ ಎದೆಯು ಬಾಯಿಗೆ ಬಂದಂತೆ ಆಯ್ತಂತೆ. ಆಸ್ಪತ್ರೆಗೆ ಕರಕೊಂಡು ಹೋಗಿ ಅಜ್ಜಿಗೆ ಟ್ರೀಟ್‌ಮೆಂಟ್ ಕೊಡಿಸಿದರಂತೆ. 'ಅಜ್ಜಿಯ ಜೀವಕ್ಕೆ ಅಪಾಯವಾಗಿದ್ದರೆ ಯಾರ್ರೀ ಹೊಣೆ, ಆಸ್ಪತ್ರೆ ಖರ್ಚನ್ನು ಯಾರ್ರೀ ಕೊಡ್ತಾರೆ?' ಅಂತ ಮೀನಾಕ್ಷಿ ಮೇಲೆ ಕಾಮಾಕ್ಷಿ ಜಗಳಕ್ಕೆ ಬಂದು ರಾಮಾಯಣ ಮಾಡಿ ಹೋದಳು. ಒಗ್ಗರಣೆ ಅಂದಮೇಲೆ ಘಾಟು, ಸೌಂಡು ಇದ್ದೇ ಇರುತ್ತದೆ. ಒಗ್ಗರಣೆ ಇಲ್ಲದೆ ಸಂಸಾರ ಮಾಡಲಾಗುತ್ತಾ?

ಅದು ಹಾಳಾಗಿ ಹೋಗ್ಲಿ, ಇನ್ನೊಂದು ಕಥೆ ಕೇಳಿ. ಪರಮೇಶಿ ಮನೆ ಕಾಂಪೌಂಡಿನ ಗುಲಾಬಿ ಗಿಡದ ಕೊಂಬೆ ತಿಪ್ಪೇಶಿ ಮನೆ ಕಾಂಪೌಂಡಿಗೆ ಚಾಚಿ ಬೆಳೆದು ಹೂ ಬಿಟ್ಟಿತ್ತು. ತಿಪ್ಪೇಶಿ ಹೆಂಡ್ತಿ ಕಕ್ಕುಲಾತಿಯಿಂದ ಆ ಹೂವು ಕಿತ್ತು ಮುಡಿದುಕೊಂಡಳು. ಅಷ್ಟಕ್ಕೇ ಪರಮೇಶಿಯ ಹೆಂಡ್ತಿ, ಮಕ್ಕಳು ಇವರ ಮೇಲೆ ಹೊಡೆದಾಟಕ್ಕೆ ಬಂದುಬಿಟ್ಟರು. ಆ ಗುಲಾಬಿ ಹೂವು ಯಾರಿಗೆ ಸೇರಬೇಕು ಅನ್ನೋದು ಇನ್ನೂ ಇತ್ಯರ್ಥ ಆಗಿಲ್ಲ. ಜಗಳದ ಕೇಸು ಪೊಲೀಸ್ ಸ್ಟೇಷನ್‌ಗೆ ಹೋಯ್ತು. ಜಗಳವಾಡಿ ಗಾಯಗೊಂಡ ಎರಡೂ ಕುಟುಂಬದವರು ಆಸ್ಪತ್ರೆಗೆ ಹೋಗಿ ಬ್ಯಾಂಡೇಜ್ ಹಾಕಿಸಿಕೊಂಡು ಬಂದರು.

ಅಕ್ಕಪಕ್ಕದ ಮನೆಯವರಾದರೂ ಗಿರಿಜಾ–ವನಜಾರ ಸಂಬಂಧ ಅಷ್ಟಕ್ಕಷ್ಟೇ. ಗಿರಿಜಾಳ ಮನೆಯವರು ಹೊಸ ಕಾರು ತಂದು ಮನೆ ಮುಂದೆ ನಿಲ್ಲಿಸಿ ಪೂಜೆ ಮಾಡಿ ಸಂಭ್ರಮಪಟ್ಟರು. ಅದನ್ನು ಕಂಡ ವನಜಾಳಿಗೆ ಇಡೀ ದಿನ ಊಟ–ತಿಂಡಿ ಸೇರಲಿಲ್ಲ, ಗಂಡನಿಗೂ ಸೇರಲು ಇವಳು ಬಿಡಲಿಲ್ಲ. ಕಾರು ತರಲಾಗದ ಅಸಹಾಯಕ ಗಂಡ 'ಎಲ್ಲವನ್ನೂ ಮೇಲಿರುವ ದೇವರು ನೋಡಿಕೊಳ್ತಾನೆ ಬಿಡು...' ಎಂದು ಹೆಂಡ್ತಿಗೆ ತಾತ್ಕಾಲಿಕ ಸಮಾಧಾನ ಹೇಳಿದ. ಅದಾಗಿ ಮಾರನೇ ದಿನ, ರಸ್ತೆಯಲ್ಲಿ ಕ್ರಿಕೆಟ್ ಆಡುತ್ತಿದ್ದ ಹುಡುಗರ ಬಾಲು ಗಿರಿಜಾಳ ಹೊಸ ಕಾರಿನ ಗಾಜು ಒಡೆಯಿತು. ಆಗಂತೂ ವನಜಾ ಸಂಭ್ರಮಪಟ್ಟಳು. ಇದಾಗಿ ಇನ್ನೊಂದು ದಿನ ಅದೇ ಕ್ರಿಕೆಟ್ ಹುಡುಗರು ವನಜಾಳ ಮನೆಯ ಕಿಟಕಿ ಗಾಜು ಒಡೆದರು.

ಕಮಲಮ್ಮನ ಮೊಬೈಲ್ ಒಡೆದುಹೋಗಲು ಪಕ್ಕದ ಮನೆಯ ವಿಮಲಮ್ಮನೇ ಕಾರಣವಂತೆ. ಹೋದ ವಾರ ಏನಾಯಿತು ಅಂದ್ರೆ, ಕಮಲಮ್ಮ ತನ್ನ ಮನೆ ಬಾಗಿಲಲ್ಲಿ ನಿಂತುಕೊಂಡು

